ವಿಷಯ :- ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಪ್ರವೇಶಾತಿಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫:- (೬೧೬)
ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಿ)
ಮಾನ್ಯ ವೈದ್ಯಕೀಯಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; (ಕಾಲೇಜುಗಳ ಹೆಸರು ಮತ್ತು ಸ್ಥಳ ನಮೂದಿಸುವುದು)

ಆ) ಪ್ರಥಮ ಎಂಬಿಬಿಎಸ್‌ಗೆ ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಅಥವಾ ಸರ್ಕಾರದಿಂದ ನಿಗಧಿಪಡಿಸಿರುವ ಪ್ರವೇಶ ಸಾಮರ್ಥ್ಯವೆಷ್ಟು?

ಇ) ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಎಂಬಿಬಿಎಸ್‌ಗೆ ಸರ್ಕಾರಿ ಕೋಟಾದಲ್ಲಿ ಮತ್ತು ಆಡಳಿತ ವರ್ಗದ ಆಡಿಯಲ್ಲಿ ಕೊಟ್ಟಿರುವ ಸೀಟುಗಳ ಸಂಖ್ಯೆ ಎಷ್ಟು?

ಈ) ಈ ವರ್ಷದಲ್ಲಿ ಸರ್ಕಾರವು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿ ಸೀಟುಗಳನ್ನು ನೀಡಿದೆಯೇ?

ಉ) ಹಾಗಿದ್ದಲ್ಲಿ ಹೆಚ್ಚುವರಿ ಸೀಟುಗಳನ್ನು ನೀಡಲು ಕಾರಣವೇನು?

ಶ್ರೀ.ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)
೧೫ (ಹದಿನೈದು)
ವಿವರಗಳನ್ನು ಅನುಬಂಧ 'ಎ' ನಲ್ಲಿ ಲಗತ್ತಿಸಲಾಗಿದೆ.
ಇಲ್ಲ
ಉದ್ಭವಿಸುವುದಿಲ್ಲ

ಅನುಬಂಧ- 'ಎ'

ಖಾಸಗಿ ವೈದ್ಯಕೀಯ ಕಾಲೇಜುಗಳ ಹೆಸರು ಮತ್ತು ಸ್ಥಳ, ಪ್ರಥಮ ಎಂ.ಬಿ.ಬಿ.ಎಸ್‌ಗೆ ಸರ್ಕಾರ ನಿಗಧಿಪಡಿಸಿರುವ ಒಟ್ಟು ಸೀಟುಗಳ ವಿವರ ಹಾಗೂ ಸರ್ಕಾರಿ ಮತ್ತು ಆಡಳಿತ ಕೋಟಾದ ಸೀಟುಗಳ ವಿವರ

ಕ್ರಮ ಸಂಖ್ಯೆ	ವೈದ್ಯಕೀಯ ಕಾಲೇಜುಗಳ ಹೆಸರು	ಒಟ್ಟು ಪ್ರವೇಶ ಸಂಖ್ಯೆ	ಆಡಳಿತ ಖೋಟಾ	ಸರ್ಕಾರಿ ಖೋಟಾ
೧.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	೩೦೦	೨೩೮	೬೨
-	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ್	೨೫೦	೨೫೦	-
೩.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	೩೨೮	೨೫೩	೭೫
೪.	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	೧೯೫	೧೪೮	೪೭
೫.	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	೧೪೫	೧೩೩	೫೨
೬.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	೨೦೦	೧೯೫	೦೫
೭.	ಆಲ್ ಅಮಾನ್ ವೈದ್ಯಕೀಯ ಕಾಲೇಜು, ಬಿಜಾಪುರ	೧೩೦	೯೮	೩೨
೮.	ಆದಿ ಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳ್ಳೂರು	೧೯೫	೧೭೬	೧೯
೯.	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	೧೫೦	೧೩೩	೧೭
೧೦.	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	೧೯೫	೧೭೧	೨೪
೧೧.	ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಂಗಳೂರು	೧೨೦	೧೦೫	೧೫
೧೨.	ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	೧೧೪	೧೧೪	-
೧೩.	ಬಿ.ಎಲ್.ಡಿ.ಇ.ಎ. ವೈದ್ಯಕೀಯ ಕಾಲೇಜು, ಬಿಜಾಪುರ	೧೪೦	೧೩೪	೦೨
೧೪.	ಡಾ.ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	೧೨೦	೧೦೪	೧೨
೧೫.	ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	೬೦	೬೦	-

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ, ಇಲ್ಲಿರುವ ೧೫ ಖಾಸಗಿ ಮಹಾ ವಿದ್ಯಾಲಯಗಳಲ್ಲಿ ಅಡಳಿತ ಖೋಟಾ ಮತ್ತು ಸರ್ಕಾರಿ ಖೋಟಾಗಳು ಸರಿ ಸಮಾನಾಂತರವಾಗಿ ಹಂಚಿಕೆಯಾಗಿಲ್ಲ. ಇತ್ತೀಚೆಗೆ ಆದಂಥ ಸುಪ್ರೀಂಕೋರ್ಟ್ ಆಜ್ಞೆ ಪ್ರಕಾರ, ೫೦ ಪರ್ಸೆಂಟ್ ಸೀಟುಗಳನ್ನು ಸರ್ಕಾರಿ ಮೆರಿಟ್ ಮುಖಾಂತರ ಆಯ್ಕೆ ಮಾಡಿಕೊಳ್ಳಬೇಕು. ಮತ್ತು ಇನ್ನುಳಿದ ೫೦ ಪರ್ಸೆಂಟ್ ಸೀಟುಗಳನ್ನು ಅಡಳಿತ ಮಂಡಳಿಯವರು ಮೆರಿಟ್ ಮುಖಾಂತರ ಆಯ್ಕೆ ಮಾಡಬೇಕೆಂದು ಆಜ್ಞೆ ಮಾಡಿದೆ. ಇದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಈ ಸರ್ಕಾರ ಜಾರಿಗೆ ಕೊಡುತ್ತದೆಯೇ, ಹೇಗೆ ತಿಳಿಸಬೇಕು. ಎರಡನೆಯದು, ಈಗತಾನೆ ತಾವು ೧೫ ಮಹಾವಿದ್ಯಾಲಯಗಳನ್ನು ಹೇಳಿದ್ದೀರಿ. ಈ ಎಲ್ಲಾ ೧೫ ಕಾಲೇಜುಗಳೂ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಮನ್ನಣೆ ಪಡೆದಿವೆಯೇ ಹೇಗೆ ತಿಳಿಸಬೇಕು. ನಾನು ಇಲ್ಲಿ ಕೇಳಿದ್ದೇನೆ. ನಿಮ್ಮ ಉತ್ತರದ ಪ್ರಕಾರ, ಈ ಎಲ್ಲಾ ೧೫ ಮಹಾ ವಿದ್ಯಾಲಯಗಳೂ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಮನ್ನಣೆ ಪಡೆದಿವೆ ಎಂದು ಉತ್ತರ ಕೊಟ್ಟಿದ್ದೀರಿ. ಇದರ ಬಗ್ಗೆ ದಯಮಾಡಿ ತಿಳಿಸಬೇಕು ಮೂರನೆಯದಾಗಿ, ಗುಲ್ಬರ್ಗಾದಲ್ಲಿರುವ ಖಾಸಗಿ ಮಹಾವಿದ್ಯಾಲಯ, ಮಹದೇವಪ್ಪ ರಾಮ್‌ಪುರಿ ಖಾಸಗಿ ಮಹಾವಿದ್ಯಾಲಯದಲ್ಲಿ, ೧೯೯೧-೯೨ನೇ ಸಾಲಿನಲ್ಲಿ ೩೪ ವಿದ್ಯಾರ್ಥಿಗಳನ್ನು ಅಲ್ಲಿರುವ ಅಡಳಿತ ಮಂಡಳಿಯವರು, ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಅನಧಿಕೃತವಾಗಿ ತೆಗೆದುಕೊಂಡಿದ್ದಾರೆ. ಈ ರೀತಿ ತೆಗೆದುಕೊಂಡ ಮೇಲೆ ಅವರುಗಳನ್ನು ಪರೀಕ್ಷೆಗೆ ಕೂರಿಸುವುದಕ್ಕೆ ಆಗಿಲ್ಲ. ಆದರೆ, ಇತ್ತೀಚಿನ ಮಾನ್ಯ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದ ಸರ್ಕಾರ ಬಂದಮೇಲೆ ಈ ೩೪ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಮತ್ತು ಕಳೆದ ವಾರ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿಯೂ ಇದು ವರದಿಯಾಗಿದೆ. ನಿಮ್ಮ ಉತ್ತರದಲ್ಲಿ ಯಾರಿಗೂ ಅನುಮತಿ ಕೊಟ್ಟಿಲ್ಲವೆಂದು ಹೇಳುತ್ತೀರಿ. ಹಾಗಾದರೆ, ಪತ್ರಿಕೆ ಸತ್ಯಕ್ಕೆ ದೂರವಾದ ಮಾತನ್ನು ಹೇಳಿದೆಯೇ ಅಥವಾ ಸರ್ಕಾರ ಈ ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದೆಯೇ ಎನ್ನುವುದನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಮಕೃಷ್ಣ :- ಮಾನ್ಯ ಅಧ್ಯಕ್ಷರೇ, ಸದಸ್ಯರು ಕೇಳಿದ ಪ್ರಕಾರ, ಮುಂದಿನ ವರ್ಷದಿಂದ, ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಆಮೇಲೆ ಸದಸ್ಯರು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಗುಲ್ಬರ್ಗಾ ನಗರದಲ್ಲಿ ನಡೆಯುತ್ತಿರುವ ಎಂ.ಆರ್. ಮೆಡಿಕಲ್ ಕಾಲೇಜಿನಲ್ಲಿ ಸುಮಾರು ೩೦ ವಿದ್ಯಾರ್ಥಿಗಳಿಗೆ, ಅವರಿಗೆ ಸಲ್ಲತಕ್ಕ ಖೋಟಾಕ್ಕಿಂತ ಹೆಚ್ಚು ಸೇರ್ಪಡೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ೧೯೯೧-೯೨ನೇ ಸಾಲು ಎಂದರೆ, ಕೇಂದ್ರಸರ್ಕಾರದ ಆದೇಶ ಬರುವುದಕ್ಕೆ ಮುಂಚಿತವಾಗಿ ಅವರು ಈ ಸೇರ್ಪಡೆ ಮಾಡಿಕೊಂಡಿದ್ದಾರೆ. ಅವರು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ನಾವು ಇನ್ನೂ ಅವರಿಗೆ ಅನುಮತಿ ಕೊಟ್ಟಿಲ್ಲ, ಇದು ಇನ್ನೂ ಪರಿಶೀಲನೆಯಲ್ಲಿದೆ. ಅವರು ಏನು ಹೆಚ್ಚಿಗೆ ಖೋಟಾ ತೆಗೆದುಕೊಂಡಿದ್ದಾರೆ, ಇದಕ್ಕೆ ಸರ್ಕಾರದವರು ಪರವಾನೆ ಕೊಟ್ಟಿಲ್ಲ, ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ :- ನೀವು ಪರವಾನಗಿ ಕೊಟ್ಟಿಲ್ಲವೆಂದು ಹೇಳುತ್ತಿದ್ದೀರಿ. ಆದರೆ, ಈಗಾಗಲೇ ಪರೀಕ್ಷೆಗೆ ಕುಳಿತುಕೊಂಡಿದ್ದಾರೆ, ವಿಶ್ವವಿದ್ಯಾನಿಲಯ ಹೇಗೆ ಮಾನ್ಯತೆ ಮಾಡಿದೆ. ಇದರ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಅಲ್ಲಿ ೩೪ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಂಡಿದ್ದಾರೆ. ಅನುಮತಿ ಇಲ್ಲದೆ ಅವರು ಹೇಗೆ ಪರೀಕ್ಷೆಗೆ ಕುಳಿತಿದ್ದಾರೆ. ನೀವು ವಿಶ್ವವಿದ್ಯಾನಿಲಯದ ಮೇಲೆ ಹಾಗೂ ಅಡಳಿತ ಮಂಡಳಿಯವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ, ತಿಳಿಸಬೇಕು.

ಎರಡನೆಯದು ಎಲ್ಲಾ ಕಡೆ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಮತ್ತು ಮೆರಿಟ್ ಕೋಟಾ ಮತ್ತು ಅಡಳಿತಮಂಡಲಿ ಕೋಟಾ ಸಮನಾಂತರವಾಗಿ ಹಂಚಿಕೆ ಆಗಿಲ್ಲ. ಕಸ್ತೂರಿಬಾ ಮೆಡಿಕಲ್ ಕಾಲೇಜು ಮಣಿಪಾಲ್ ಅಲ್ಲಿರುವುದು ಟೋಟಲ್ ಸಂಖ್ಯೆ ೨೫೦ ಇದ್ದರೆ ಅಡಳಿತ ಮಂಡಲಿ ಕೋಟಾ ೨೫೦ಕ್ಕೆ ಇದೆ, ಅಲ್ಲಿ ಸರ್ಕಾರಿ ಕೋಟಾ ಇಲ್ಲವೇ ಇಲ್ಲ. ಅದೇ ರೀತಿ ಸೆಂಟ್ ಜಾನ್ಸ್ ಕಾಲೇಜಿನಲ್ಲಿ ೬೦ ಸೀಟು ಇದ್ದರೆ ೬೦ ಕೂಡ ಅಡಳಿತ ಮಂಡಲಿ ಸೀಟುಗಳೇ ಇವೆ. ಸರ್ಕಾರಿ ಕೋಟಾ ಇಲ್ಲ. ಬೇರೆ ಬೇರೆ ಕಾಲೇಜುಗಳನ್ನು ತಾವು ನೋಡಿ. ಉದಾಹರಣೆಗೆ ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ೩೨೮ ಸೀಟುಗಳು ಇದ್ದರೆ ಅದರಲ್ಲಿ ೨೫೩ ಸೀಟುಗಳನ್ನು ಅಡಳಿತ ಮಂಡಲಿ ಕೋಟಾಗೆ ಕೊಟ್ಟಿದ್ದೀರಿ. ೭೫ ಸೀಟುಗಳು ಮಾತ್ರ ಸರ್ಕಾರಿ ಕೋಟಾ ತೆಗೆದುಕೊಂಡಿದ್ದೀರಿ. ಎಲ್ಲೂ ಸರ್ಕಾರಿ ಕೋಟಾ ಮತ್ತು ಅಡಳಿತ ಮಂಡಲಿ ಕೋಟಾ ಸಮನಾಂತರವಾಗಿ ಹಂಚಿಕೆ ಮಾಡಿಲ್ಲ, ಇದಕ್ಕೆ ಕಾರಣ ಏನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ರಾಮಕೃಷ್ಣ:- ಎಲ್ಲಾ ಕಾಲೇಜುಗಳಿಗೆ ಸಮನಾಂತರವಾಗಿ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಕಾಲೇಜುಗಳ ಕೆಪ್ಯಾಸಿಟಿ ಬೇರೆ ಬೇರೆ ಇರುತ್ತದೆ. ಆಗ ವ್ಯತ್ಯಾಸ ಆಗುತ್ತದೆ. ಈಗ ಬೆಡ್ಸ್ ಎಷ್ಟು ಇದೆ, ಸಂಬಂಧಪಟ್ಟ ಕಾಲೇಜುಗಳಿಗೆ ನಾವು ಪರ್ಮಿಶನ್ ಕೊಡುವ ಸಂದರ್ಭದಲ್ಲಿ ಎಷ್ಟು ಸೀಟು ಅಂತ ಅಪ್ರೂವ್ ಮಾಡುವಾಗ ನೋಡಿ ಕೊಡಬೇಕಾಗುತ್ತದೆ. ಎಲ್ಲಾ ಕಾಲೇಜುಗಳಿಗೆ ಸಮನಾಂತರವಾಗಿ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್:- ಕೆಪಾಸಿಟಿ ಅಂದರೆ ಎಷ್ಟು ಡೊನೇಶನ್ ತೆಗೆದುಕೊಳ್ಳುತ್ತಾರೆ. ಅದರ ಮೇಲೆ.....

ಶ್ರೀ ಬಸವರಾಜರಾಯರೆಡ್ಡಿ:- ಈಗ ಕೊಟ್ಟಿರುವ ಉತ್ತರ ಬೇರೆ ಇದೆ. ಇದು ಸಮಾಧಾನಕರವಾದ ಉತ್ತರ ಅಲ್ಲ. ದಯವಿಟ್ಟು ವಿವರವಾಗಿ ನಮಗೆ ತಿಳಿಸಬೇಕು.

ಶ್ರೀ ಜಿ. ರಾಮಕೃಷ್ಣ:- ಸಮನಾಂತರವಾಗಿ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅವರಿಗೆ ನನ್ನ ಸಲಹೆ ಅವರು ಹೊಸದಾಗಿ ಮಂತ್ರಿಗಳಾಗಿದ್ದಾರೆ, ವಿಚಾರಗಳನ್ನು ಆಳವಾಗಿ ತಿಳಿದುಕೊಂಡು ಉತ್ತರ ಹೇಳಬೇಕಾಗುತ್ತದೆ.

ಶ್ರೀ ಬಸವರಾಜರಾಯರೆಡ್ಡಿ:- ಅದಕ್ಕೆ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿ.

ಶ್ರೀ ಜಿ. ರಾಮಕೃಷ್ಣ:- ಸಮನಾಂತರವಾಗಿ ಸೀಟುಗಳ ಹಂಚಿಕೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ:- ಈಗ ಜೆ.ಎನ್. ಮೆಡಿಕಲ್ ಕಾಲೇಜು ಬೆಳಗಾಂ ಇಲ್ಲಿ ಒಟ್ಟು ಸೀಟುಗಳು ೧೯೫ ಇದೆ. ಅದರಲ್ಲಿ ಸರ್ಕಾರಿ ಕೋಟಾ ೪೭ ಇದೆ. ಅದೇ ರೀತಿ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮೈಸೂರು ಅಲ್ಲಿ ೨೦೦ ಸೀಟುಗಳು ಇದೆ. ಅದರಲ್ಲಿ ಕೇವಲ ೫ ಸರ್ಕಾರಿ ಕೋಟ ಇದೆ. ಈಗ ೨೦೦ ಸೀಟುಗಳು ಇರುವ ಕಡೆ ಸರ್ಕಾರಿ ಕೋಟ ೫ ಇದ್ದು ಅದೇ ೧೯೫ ಸೀಟುಗಳು ಇರುವ ಕಡೆ ೪೭ ಸರ್ಕಾರಿ ಕೋಟಾ ಇದೆ. ಇದನ್ನು ಯಾವ ಆಧಾರದ ಮೇಲೆ ಸರ್ಕಾರಿ ಕೋಟಾ ನಿಗಧಿ ಮಾಡುತ್ತೀರಿ? ಅದಕ್ಕೆ ಏನಾದರೂ ಒಂದು ನೆಲೆ ಇದೆಯೇ? ಇಲ್ಲಾ ನಿಮ್ಮ ಖುಷಿ ಬಂದ ಹಾಗೆ ಸರ್ಕಾರಿ ಕೋಟಾ ನಿಗಧಿಪಡಿಸುತ್ತೀರಾ? ಯಾವ ಆಧಾರ ಇದೆ ದಯವಿಟ್ಟು ತಿಳಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದು ಬಹಳ ಮಹತ್ವವಾದ ವಿಚಾರ ಅವರು ಕ್ಲಿನಿಕಲ್ ಫೆಸಿಲಿಟೀಸ್ ಯಾರಿಂದ ತೆಗೆದುಕೊಳ್ಳುತ್ತಾರೆ? ಎಷ್ಟು ತೆಗೆದುಕೊಳ್ಳುತ್ತಾರೆ? ಬೆಡ್ಸ್ ಸ್ಟೆಂತ್ ನೋಡಿ ಕೋಟಾ ಫಿಕ್ಸ್ ಮಾಡುತ್ತಾರೆ. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ಏಕೆಂದರೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳ ಕೆಲವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ,

ಕೆಲವು ಸಂಘ ಸಂಸ್ಥೆಗಳು ಜಾತೀಯ ಆಧಾರದ ಮೇಲೆ ಇರಬಹುದು ಧರ್ಮದ ಹೆಸರಿನಲ್ಲಿ ಇರಬಹುದು ನಡೆಸುತ್ತಿದ್ದಾರೆ. ಕೆಲವು ಇಂಡಿವಿಜಿಯಲ್ಸ್ ತಮ್ಮ ಸ್ವಂತಕ್ಕಾಗಿ ನಡೆಸಿಕೊಳ್ಳುತ್ತಿದ್ದಾರೆ. ಅವರು ಸುಳ್ಳು ವರದಿಗಳನ್ನು ಸರ್ಕಾರಕ್ಕೆ ಕೊಡುತ್ತಾರೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಅರ್ಧ ಗಂಟೆ ವಿಶೇಷ ಚರ್ಚೆಗೆ ಅವಕಾಶ ಮಾಡಲು ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಮಕೃಷ್ಣ:- ಇದಕ್ಕೂ ಮೊದಲು ಸೀಟ್ಸ್ ಅಲಾಟ್‌ಮೆಂಟ್ಸ್ ಮಾಡುವಲ್ಲಿ ಹೆಚ್ಚು ಕಡಿಮೆ ಆಗಿದೆ. ಮುಂದೆ ಈ ವರ್ಷ ಏನು ಕೊಡುತ್ತೇವೆ ಅದನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ :- ನಾವು ಯಾರೂ ತಮ್ಮ ಮೇಲೆ ದೂರು ಮಾಡುತ್ತಿಲ್ಲ. ತಾವು ಹೊಸಬರು ಇದ್ದೀರಿ. ತಾವು ಎಲ್ಲಾ ಸರಿಯಾಗಿ ತಿಳಿದುಕೊಳ್ಳಬೇಕು. ಸೀಟ್‌ಗಳು ಹೆಚ್ಚು ಕಡಿಮೆ ಆಗಿದೆ. ಕ್ಲಿನಿಕಲ್ ಫೆಸಿಲಿಟೀಸ್ ಎಲ್ಲಿಂದ ಹೇಗೆ ತೆಗೆದುಕೊಳ್ಳುತ್ತಾರೆ. ಈಗ ಮಣಿಪಾಲ್ ಮೆಡಿಕಲ್ ಕಾಲೇಜು ಇದೆ ಅದು ಮೈನಾರಿಟಿ ಇನ್‌ಸ್ಟಿಟ್ಯೂಶನ್ ಇದೆ. ಇವೆಲ್ಲಾ ಸಚವರಿಗೆ ಗೊತ್ತಿಲ್ಲ ಅವರು ವಿಷಯ ತಿಳಿದು ಕೊಳ್ಳಲಿ ಅದಕ್ಕೆ ತಾವು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಮಂತ್ರಿಗಳು ಸತ್ಯಸಂಗತಿ ಹೇಳುತ್ತಿದ್ದಾರೆ. ಹೆಚ್ಚು ಕಡಿಮೆ ಮಾಡಿದ್ದಾರೆಂದು. ಅದನ್ನು ಪೂರ್ತಿಯಾಗಿ ತಿಳಿದುಕೊಳ್ಳೋಣ. ಮಂತ್ರಿಗಳು ಸತ್ಯ ಹೇಳಬಾರದೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸಚವರು ಸತ್ಯ ಹೇಳಲು ಅವಕಾಶ ಮಾಡಿ ಕೊಡಿ. ಸೀಟು ಹಂಚಿಕೆ ಮಾಡುವಲ್ಲಿ ಹೆಚ್ಚುಕಡಿಮೆ ಆಗಿದೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಸೀಟು ಹಂಚಿಕೆಯಲ್ಲಿ ತಪ್ಪಾಗಿದ್ದರೆ ಮುಂದೆ ಸರಿ ಮಾಡಿದರೆ ಸಂತೋಷ. ಆದ್ದರಿಂದ ಮಾನ್ಯ ಸಿಂಧ್ಯಾರವರು ಹೇಳಿದಹಾಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ. ಮಾನ್ಯ ಮುಖ್ಯಮಂತ್ರಿಗಳು ಇರಲಿ ಮಂತ್ರಿಗಳು ಇರಲಿ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಡಾ: ವೈ. ನಾಗಪ್ಪ:- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ, private medical colleges have not maintained the norms given by the IMC. ಮೆಡಿಕಲ್ ಕಾಲೇಜು ಸ್ಯಾಂಕ್ಷನ್ ಮಾಡಬೇಕಾದರೆ ಕ್ಲಿನಿಕಲ್ ಫೆಸಿಲಿಟಿ ಇರಬೇಕೆಂದು ನಾರ್ಮ್ಸ್ ಇದೆ. ನಾವು ಓದುತ್ತಿರುವಾಗ ಒಂದು ಫ್ರೀ ಕ್ಲಿನಿಕ್‌ನಲ್ಲಿ ಡಿಸಕ್ಷನ್ ಮಾಡಬೇಕಾದರೆ ಒಂದು ಡೆಡ್ ಬಾಡಿಯನ್ನು ೧೫ ಜನ ವಿದ್ಯಾರ್ಥಿಗಳು ಮಾಡುತ್ತಿದ್ದರು. ಈಗ ಡೆಡ್ ಬಾಡಿ ಡಿಸಕ್ಷನ್ ಮಾಡಬೇಕಾದರೆ ಸುಮಾರು ೭೦ ರಿಂದ ೧೦೦ ವಿದ್ಯಾರ್ಥಿಗಳಿರುತ್ತಾರೆ. ಒಂದು ಡೆಡ್ ಬಾಡಿಯನ್ನು ಎಷ್ಟು ಜನ ಡಿಸೆಕ್ಷನ್ ಮಾಡುತ್ತಾರೆ? ಮತ್ತು ಆ ಕಾಲೇಜಿಗೆ ಕ್ಲಿನಿಕಲ್ ಫೆಸಿಲಿಟಿ ಇದೆಯೇ ಎಂದು ನೋಡಬೇಕು.

ಅಧ್ಯಕ್ಷರು:- ಉಪ ಪ್ರಶ್ನೆ ಕೇಳಿ.

DR.Y.Nagappa: In my opinion, so far, no medical college has maintained any norms fixed by the IMC. Therefore, I request through

the Hon'ble Speaker, to the Government and Minister to reduce the number of seats to have better quality of doctors in our State. That is my contention. It has become a trade. Let them not mix trade with Education. It is the question of life and death.

ಶ್ರೀ ಬಸವರಾಜ ರಾಯರೆಡ್ಡಿ:- ೩೪ ಜನ ವಿದ್ಯಾರ್ಥಿಗಳನ್ನು ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಆದರೆ ಅವರು ಪರೀಕ್ಷೆಗೆ ಕೂರಿಸಿದ್ದಾರೆ. ಇದರ ಬಗ್ಗೆ ಉತ್ತರ ಕೊಡಿ.

ಶ್ರೀ ಜಿ. ರಾಮಕೃಷ್ಣ:- ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ೩೪ ಜನ ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷೆ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ರಾಮಕೃಷ್ಣ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಸಚಿವರು ಗುಲ್ಬರ್ಗಾ ಜಿಲ್ಲೆಯವರಿದ್ದಾರೆ. ಮಾನ್ಯ ಸಚಿವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತಿದೆ. ಗೊತ್ತಿದ್ದೂ ಕೂಡ ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಜಿ. ರಾಮಕೃಷ್ಣ:- ೯೧೯೨ ರೊಳಗೆ ಅವರನ್ನು ಅಡ್ಮಿಟ್ ಮಾಡಿದ್ದಾರೆ. ಇದು ಸೆಂಟ್ರಲ್ ಗೌರ್ನಮೆಂಟ್ ಇನ್‌ಸ್ಪೆಕ್ಷನ್ ಮತ್ತು ಆರ್ಡರ್ ಬಂದ ಮೇಲೆ ಕೊಡಲಾಗಿದೆಯೋ ಎಂಬುದನ್ನು ಪರಿಶೀಲನೆ ಮಾಡುತ್ತೇನೆ. ಮತ್ತು ಅವರನ್ನು ಎಕ್ಸಾಮಿನೇಷನ್‌ಗೆ ಅಲೋ ಮಾಡಬೇಕೇ ಬೇಡವೇ ಎಂಬುದನ್ನೂ ಪರಿಶೀಲನೆ ಮಾಡುತ್ತೇನೆ.

ವಿಷಯ:- ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೭:- (೬೩೩)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಪಡಿಸಲು ಸಾಕಷ್ಟು ಉತ್ತಮ ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಾಜ್ಯದಲ್ಲಿ ಒಟ್ಟು ಎಷ್ಟು ಸಾವಿರ ಎಕರೆ ಪ್ರದೇಶಗಳಲ್ಲಿ ಅರಣ್ಯವಿರುವುದು (ಜಿಲ್ಲಾವಾರು ವಿವರ ನೀಡುವುದು)

ಇ) ಇನ್ನೂ ಎಷ್ಟು ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿಪಡಿಸಲಾಗುವುದು.

ಈ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನನ್ನು ಅರಣ್ಯವನ್ನಾಗಿ ಅಭಿವೃದ್ಧಿ ಪಡಿಸಲು ಗುರುತಿಸಲಾಗಿದೆ. ಹಾಗೂ ಈ ಕಾರ್ಯಕ್ರಮವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಂ.ಪಿ. ಕೇಶವಮೂರ್ತಿ
(ಅರಣ್ಯ ರಾಜ್ಯ ಸಚಿವರು)

ಬಂದಿದೆ.

ಒಟ್ಟು ೩೮,೩೪,೪೩೪ ಹೆಕ್ಟೇರ್ ಪ್ರದೇಶ. ಜಿಲ್ಲಾವಾರು ವಿವರ ಈ ಕೆಳಗಿನಂತೆ ಇದೆ.